**ಓ.ಎಸ್. ನಂಃ 210/2021**

**ಡಿ.ಡಬ್ಲ್ಯೂಃ 1**

**ದಿನಾಂಕ 15.12.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಆರ್.ಕೆ ವಕೀಲರಿಂದಃ**

3. ದಾವಾ ಆಸ್ತಿಗೂ ಮತ್ತು ನಮ್ಮ ಮನೆಗೂ 10 ರಿಂದ 15 ಅಡಿ ಅಂತರ ವಿದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ದಾವಾ ಆಸ್ತಿ ಮತ್ತು ನಮ್ಮ ಮನೆಯ ಮದ್ಯೆ ಅಂದಾಜು 5 ರಿಂದ 6 ಅಡಿ ಇರಬಹುದು ಎಂದು ಸ್ವತಃ ನುಡಿದಿರುತ್ತಾರೆ. ದಾವಾ ಆಸ್ತಿ ಮತ್ತು ನಮ್ಮ ಮನೆಯ ಮದ್ಯೆ ಕಲ್ಲು ಕಂಬ ಗಳನ್ನು ನೆಟ್ಟು ತಂತಿ ಬೇಲಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಆಸ್ತಿಯನ್ನು ಒತ್ತುವರಿ ಮಾಡಿ ವಾದಿ ಗಿಲಾವು ಮಾಡುತ್ತಿದ್ದಾರೆ ಎಂದು ಹೇಳಿ ನಾವು ವಾದಿಯ ವಿರುದ್ಧ ಪೋಲೀಸ್ ಠಾಣೆಯಲ್ಲಿ ಯಾವುದೇ ದೂರನ್ನು ನೀಡಿರುವುದಿಲ್ಲ ಆದರೆ ಪಂಚಾಯ್ತಿಗೆ ದೂರನ್ನು ನೀಡಿರುತ್ತೇವೆ. ನೀವು ವಾದಿಯ ವಿರುದ್ಧ ಪಂಚಾಯ್ತಿಗೆ ದೂರನ್ನು ನೀಡಿದ್ದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸ ಬಹುದಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ವಾದಿಯ ಚಿತಾವಣೆಯ ಮೇರೆಗೆ ಪಂಚಾಯ್ತಿಯವರು ನನ್ನಿಂದ ದೂರು ಸ್ವೀಕೃತಿಸಿದ ಬಗ್ಗೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ.

4. ವಾದಿಯು ನೆಟ್ಟಿದ್ದ ಕಲ್ಲು ಕಂಬಗಳನ್ನು ನಾವು ಕಿತ್ತು ಹಾಕಿ ನಮ್ಮ ಮನೆಯ ಬಚ್ಚಲು ನೀರನ್ನು ದಾವಾ ಆಸ್ತಿಗೆ ಬಿಟ್ಟು ವಾದಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ಪೋಟೋವನ್ನು ತೋರಿಸಿದ್ದು ಅದರಲ್ಲಿ ಕಾಣುತ್ತಿರುವ ಗಿಲಾವು ಆಗದ ಗೋಡೆಯು ದಾವಾ ಆಸ್ತಿಯ ಗೋಡೆ ಎಂದು ದಾವಾ ಆಸ್ತಿಯ ಗೋಡೆಯ ಪಕ್ಕದಲ್ಲಿ ಇರುವ ಉದ್ದದ ಗುಂಡಿ ಯಲ್ಲಿ  ನಮ್ಮ ಮನೆಯ ಬಚ್ಚಲು ನೀರನ್ನು ಬಿಟ್ಟಿರುವುದು ಹೌದು ಎಂದು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ಪೋಟೋವನ್ನು ನಿಪಿ.17 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ನಿಪಿ.15 ರಲ್ಲಿ ಕಾಣುತ್ತಿರುವ ಉದ್ದದ ಗುಂಡಿಯನ್ನು ನಾವೇ ತೋಡಿ ನಮ್ಮ ಬಚ್ಚಲು ಮನೆಯ ನೀರನ್ನು ಬಿಟ್ಟಿದ್ದು, ಸದರಿ ಗುಂಡಿ ತೋಡಿದ ಜಾಗವು ನಮಗೆ ಸೇರಿರುತ್ತದೆ ಎಂದು ಸಾಕ್ಷಿಯು ಸ್ವತಃ ನುಡಿದಿರುತ್ತಾರೆ.

5. ದಾವಾ ಆಸ್ತಿಯ ಗೋಡೆಯ ಗಿಲಾವು ಕೆಲಸ ಮಾಡಿಸಲು ನಿಮಗೆ ಯಾವುದೇ ತೊಂದರೆ ಇಲ್ಲಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ವಾದಿ ನಮಗೆ ಸೇರಿದ ಅರ್ಧ

ಅಡಿ ಜಾಗವನ್ನು ಒತ್ತುವರಿ ಮಾಡಿದ್ದು, ನಾವು ವಾದಿಗೆ ದಾವಾ ಆಸ್ತಿಯ ಗೋಡೆಯ ಗಿಲಾವು ಮಾಡಿಸಲು ಬಿಡುವುದಿಲ್ಲ ಎಂದು ನುಡಿದಿರುತ್ತಾರೆ. ವಾದಿ ನಮಗೆ ಸೇರಿದ ಅರ್ಧ ಅಡಿ ಜಾಗವನ್ನು ಒತ್ತುವರಿ ಮಾಡಿರುತ್ತಾರೆ ಎಂದು ನಾವು ವಾದಿಯ ವಿರುದ್ಧ ಯಾವುದೇ ದಾವೆಯನ್ನು ಹೂಡಿರುವುದಿಲ್ಲ ಆದರೆ ಪಂಚಾಯ್ತಿಗೆ ದೂರನ್ನು ನೀಡಿರುತ್ತೇವೆ. ಕೇವಲ ವಾದಿಗೆ ತೊಂದರೆ ಕೊಡುವ ದುರುದ್ದೇಶದಿಂದ ದಾವಾ ಆಸ್ತಿಯ ಗೋಡೆಯ ಗಿಲಾವು ಮಾಡಿಸಲು ನಾವು ವಾದಿಗೆ ಬಿಡುತ್ತಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ವಾದಿಯೇ ನಮಗೆ ತೊಂದರೆ ಕೊಡುತ್ತಿದ್ದಾರೆ ಎಂದು ಸ್ವತಃ ನುಡಿದಿರುತ್ತಾರೆ. ವಾದಿಗೆ ಸೇರಿದ ದಾವಾ ಆಸ್ತಿಯಲ್ಲಿ ವಾದಿ ತಮ್ಮ ಕೆಲಸಗಳನ್ನು ಮಾಡಿಸುತ್ತಿದ್ದರೂ ಸಹ ನಾನು ವಿನಾ ಕಾರಣ ವಾದಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.17 ರಲ್ಲಿ ಕಾಣುತ್ತಿರುವ ಜಾಗವು ವಾದಿಗೆ ಸೇರಿದ್ದರೂ ಸಹ ಇಲ್ಲಾ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**